ಶ್ರೀ ಎಂ.ಎಸ್.ಆತ್ಮಾನಂದ: ನಮ್ಮ ಸಂಪರ್ಕ ನಾಲೆಯ ಸುಮಾರು 800 ಕ್ಯೂಸೆಕ್ಸ್ ನೀರು ಈ ಒಂದು ಕಾವೇರಿ ಶಾಖೆಗೆ ಹೆಚ್ಚುವರಿಯಾಗಿ ದೊರೆಯುವಂತದ್ದು, ವಿಶ್ವೇಶ್ವರಯ್ಯ ನಾಲಾ ಕೊನೆಯ ಅಚ್ಚುಕಟ್ಟು ಪ್ರದೇಶಗಳಿಗೆ ರೈತರಿಗೆ ನೀರಿನ ಕೊರತೆಯನ್ನು ನೀಗಿಸಲಿಕ್ಕೆ, ಸಮಸ್ಯೆಯನ್ನು ನಿವಾರಣೆ ಮಾಡಲಿಕ್ಕೆ ಈ ಒಂದು ಸಂಪರ್ಕನಾಲೆಯನ್ನು ಮಾಡಿರುವಂಥದ್ದು. ಈ ಒಂದು ಸಂಪರ್ಕ ನಾಲೆಯಲ್ಲಿ ಹಿಂದೆ ನೀರನ್ನು ಬಿಟ್ಟಾಗ ಅಲ್ಲಿ ಮಾಡಿರತಕ್ಕಂತಹ ಸಂಪರ್ಕನಾಲೆಯ ಕಾಮಗಾರಿಯ ಅಂಗವಾಗಿರತಕ್ಕಂತಹ ಟನಲ್ ಏನಿದೆ, ಆ ಟನಲ್‌ನಲ್ಲಿ 800 ಕ್ಯೂಸೆಕ್ಸ್ ನೀರು ಡಿಸ್‌ಚಾರ್ಜ್ ಆಗಿದೆ. ಸುಮಾರು 350-400 ಪಿಸ್ಟನ್ ಆಗಿ ಅದರಿಂದ ತೊಂದರೆಯಾಗಿದೆ ಎಂದು ನಾನು ಕೇಳಿದ್ದೇನೆ. ಇದು ವಾಸ್ತವವಾದ ಅಂಶವೇ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್: ಈ ಸಂಪರ್ಕ ನಾಲೆ, ವಿ.ಸಿ. ನಾಲೆಯ 37ನೇ ಕಿ.ಮೀ.ನಿಂದ ಪ್ರಾರಂಭವಾಗಿ 27 ಕಿ.ಮೀ. ಉದ್ದವಿದೆ ಅದರಲ್ಲಿ 1.3. ಕಿ.ಮೀ. ಸುರಂಗವಿದೆ, ಈ ನಾಲೆಯ 27ನೇ ಕಿ.ಮೀ. ಕಾವೇರಿ ಶಾಖೆಯನ್ನು ಸೇರುತ್ತದೆ. ಇದರ ಅಡಿಯಲ್ಲಿ 5,250 ಎಕರೆ ಅರೆ ಕೃಷಿ ನೀರಾವರಿಗೆ ಒಳಪಡುತ್ತದೆ. ಈ ನಾಲೆಯ ಸಾಮರ್ಥ್ಯ 800 ಕ್ಯೂಸೆಕ್ಸ್ ಎಂದು ತಾವೇನು ಪ್ರಸ್ತಾಪ ಮಾಡಿದ್ದೀರಿ, ಅಷ್ಟು ಇರುವುದು ಸತ್ಯವಾದುದು. ಈ ಆಧುನೀಕರಣಕ್ಕೆ ನಿಮಗೆ ಗೊತ್ತಿರುವ ಹಾಗೆ ಒಟ್ಟು 350 ಕೋಟಿ ರೂಪಾಯಿಗಳ ಪರಿಷ್ಕೃತ ಅಂದಾಜಿನಲ್ಲಿ ಈ ವಿಭಾಗಕ್ಕೆ ಸೇರಿರುವಂತಹ ಸಂಪರ್ಕನಾಲೆಯ ಕಲಸಗಳನ್ನು ಹಾಗೂ ಇತರ ಕಾಮಗಾರಿಗಳನ್ನು ಮಾಡಲಾಗಿದೆ, ಅದರಲ್ಲಿ 75 ಕೋಟಿ ರೂಪಾಯಿಗಳಷ್ಟು ಖರ್ಚಾಗಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಗೆ ಬರಬೇಕಾದ ಬಾಕಿ.

288(2856)

ಶ್ರೀ ಪಿ.ಸಿ.ಮೋಹನ್(ಚಿಕ್ಕಪೇಟೆ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ. ಕಳೆದ 3 ವರ್ಷಗಳಿಂದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಸರ್ಕಾರಿ, ಅರೆ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಿಂದ ಬಾಕಿ ಬರಬೇಕಾದ ಹಣವೆಷ್ಟು?

1. ಕೇಂದ್ರ ಸರ್ಕಾರದ ಕಛೇರಿಗಳು

2. ರಾಜ್ಯ ಸರ್ಕಾರದ ಕಛೇರಿಗಳು

3. ಅರೆ ಸರ್ಕಾರಿ ಸಂಸ್ಥೆಗಳು

4. ಖಾಸಗಿ ಸಂಸ್ಥೆಗಳು

ಒಟ್ಟು ಬಾಕಿ

ಆ. ಸದರಿ ಹಣವನ್ನು ವಸೂಲಿ ಮಾಡಲು ಮಂಡಳಿ ತೆಗೆದುಕೊಂಡಿರುವ ಕ್ರಮಗಳೇನು?

ಇ. ಕಳೆದ 5 ವರ್ಷಗಳಿಂದ ಮಂಡಳಿಯು ಅನುಭವಿಸುತ್ತಿರುವ ಕೊರತೆ ಹಣವೆಷ್ಟು? (ವರ್ಷವಾರು ವಿವರ ನೀಡುವುದು)

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಯವರು):

ಅ)

1996-97 (ರೂ. ಲಕ್ಷಗಳಲ್ಲಿ)	1997-98 (ರೂ. ಲಕ್ಷಗಳಲ್ಲಿ)	1998-99 (ರೂ. ಲಕ್ಷಗಳಲ್ಲಿ)	ಒಟ್ಟು ಬರಬೇಕಾದ ಬಾಕಿ
38.45	7.05	24.39	69.89
426.26	301.15	286.89	1014.30
1107.31	1067.28	1284.79	3459.38
12.14	17.10	221.48	250.72
1584.16	1392.58	1817.55	4794.29

ಆ) ಮೇಲ್ಕಂಡ ಬಾಕಿ ಹಣವನ್ನು ವಸೂಲಿ ಮಾಡಲು ಮಂಡಳಿಯಲ್ಲಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. (1) ಮಂಡಳಿಯ ಕಿರಿಯ ಅಧಿಕಾರಿಗಳಿಂದ ಹಿಡಿದು ಅಧ್ಯಕ್ಷರವರೆವಿಗೂ ಸಹ ಸಂಬಂಧಪಟ್ಟ ಕಛೇರಿ ಮುಖ್ಯಸ್ಥರುಗಳಿಗೆ ಪತ್ರಗಳನ್ನು ಹಾಗೂ ಅರೆ ಸರ್ಕಾರಿ ಪತ್ರಗಳನ್ನು ಬರೆದು ಪಾವತಿಸುವಂತೆ ಕೇಳಿ ಕೊಳ್ಳಲಾಗುತ್ತಿದೆ. ಅಲ್ಲದೆ ಧೀರ್ಘ ಕಾಲದಿಂದ ಬಾಕಿ ಉಳಿದಿರುವ ಹಣವನ್ನು ವಸೂಲಿ ಮಾಡಲು ರೆವಿನ್ಯೂ ಇಲಾಖೆಯಿಂದ ತಹಸಿಲ್ದಾರವರನ್ನು ಎರವಲು ಸೇವೆ ಮೇಲೆ ಮಂಡಳಿಗೆ ನಿಯೋಜಿಸಿ

ಕೊಂಡು ಮಂಡಳಿಯ ನಿಯಮಾನುಸಾರ ಪ್ರಕರಣ 108 ಎ ರೀತ್ಯ ಬಾಕಿದಾರರ ವಿರುದ್ಧ ಅವರ ಚಿರ ಹಾಗೂ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಸಲುವಾಗಿ ಸಂಬಂದಪಟ್ಟ ಜಿಲ್ಲಾಧಿಕಾರಿಯವರಿಂದ ಅನುಮತಿ ಪಡೆದು ಕ್ರಮ ಜರುಗಿಸಲಾಗುತ್ತಿದೆ. ಈ ವಿಧಾನದಿಂದ ಕೆಲವು ಪ್ರಕರಣಗಳಲ್ಲಿ ಮಂಡಳಿಗ 99-2000ನೇ ಸಾಲಿನಲ್ಲಿ ರೂ.77.50 ಲಕ್ಷಗಳಷ್ಟು ಹಣ ವಸೂಲಾತಿ ಆಗಿರುತ್ತದೆ. (ಸರ್ಕಾರಿ ಕಛೇರಿಗಳನ್ನು ಹೊರತುಪಡಿಸಿ) ಮುಂದುವರಿದಂತೆ ಕೆಲವು ಗ್ರಾಮ ಪಂಚಾಯ್ತಿಗಳಾದ ದೇವರ ಜೀವನ ಹಳ್ಳಿ, ಹೆಬ್ಬಾಳ, ಪೀಣ್ಯ ಇವುಗಳಿಂದ ಬರಬೇಕಾದ ಬಾಕಿ ಹಣವನ್ನು ಸರ್ಕಾರದಿಂದ ಅವುಗಳಿಗೆ ಬಿಡುಗಡೆ ಮಾಡುವ ವರ್ಷದ ಅನುದಾನಗಳಲ್ಲಿ ಕಟಾವಣೆ ಮಾಡಿ ಪಾವತಿ ಮಾಡಲೂ ಸಹ, ಆರ್ಥಿಕ ಇಲಾಖಾ ಕಾರ್ಯದರ್ಶಿಗಳವರಿಗೆ ಮನವಿ ಪತ್ರಗಳನ್ನು ಸಹ ಬರೆಯಲಾಗುತ್ತಿದೆ. ರಾಜ್ಯ ಸರ್ಕಾರಿ ಕಛೇರಿಗಳ ಬಾಕಿ ವಸೂಲಾತಿಗಾಗಿ ಎಲ್ಲಾ ಇಲಾಖಾವಾರು ಬಾಕಿ ಪಟ್ಟಿ ಮಾಡಿ 2000-2001ನೇ ಇಸವಿಯ ಮುಂಗಡ ಪತ್ರಗಳಲ್ಲಿ ಅವಕಾಶ ಕಲ್ಪಿಸುವಂತೆ, ಸರ್ಕಾರಿ ಕಾರ್ಯದರ್ಶಿಗಳವರುಗಳಿಗೆ ವಿವರಣಾ ಪಟ್ಟಿಯನ್ನು ಸಹ ಕಳಿಸಿ ಕೊಡಲಾಗಿದೆ.

ಇ)	ಇಲ್ಲ. ಮಂಡಳಿಯು ಭರಿಸಬೇಕಾಗಿದ್ದ ಸಾಲದ ಮೇಲಿನ ಬಡ್ಡಿಯನ್ನು ಸರ್ಕಾರವು ಮನ್ನಾ ಮಾಡಿದ ಕಾರಣ ಕೊರತೆ ಉಂಟಾಗಲಿಲ್ಲ (94-95)	(95-96)	(96-97)	(97-98)	(98-99)	(ರೂ. ಲಕ್ಷಗಳಲ್ಲಿ)
		375.09	4679.50	1305.94	1002.14	7362 .65

ಶ್ರೀ ಪಿ.ಸಿ.ಮೋಹನ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ, ಈ ಒಂದು ಹಣವನ್ನು ವಸೂಲಿ ಮಾಡಲು ಎಷ್ಟು ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆ ಎಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳುತ್ತಿದ್ದೇನೆ.

ಶ್ರೀ ಎಸ್.ಎಂ.ಕೃಷ್ಣ: ಹಣವನ್ನು ವಸೂಲಿ ಮಾಡಲು ಎಷ್ಟು ಅವಶ್ಯಕವೋ ಅಷ್ಟು ಅಧಿಕಾರಿಗಳನ್ನು ನೇಮಕ ಮಾಡುತ್ತೇವೆ.

ಶ್ರೀ ಸಿ.ಬೈರೇಗೌಡ: ಖಾಸಗಿಯವರಿಂದ ಬಹಳಷ್ಟು ಹಣ ಬರಬೇಕಾಗಿರುವಂಥದ್ದರ ಬಗ್ಗೆ ತಮ್ಮ ಉತ್ತರದಲ್ಲಿ ಗೊತ್ತಾಗುತ್ತದೆ. ಇದು ಸರ್ಕಾರಿ ಮತ್ತು ಅರೆಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಬರಬೇಕಾಗಿರುವುದರ ಜೊತೆಗೆ, ಖಾಸಗಿಯವರಿಂದಲೂ ಸಹ ಬರಬೇಕಾಗಿರುವಂತಹ ಹಣವನ್ನು, ಅದು ಎಷ್ಟಾದರೂ ಇರಲಿ ಅದು ಯಾವ

ಕಾರಣದಿಂದ ಬಾಕಿ ಉಳಿದುಕೊಂಡಿದೆ. ಏಕೆಂದರೆ ಹಣ ಕೊಡದೇ ಇದ್ದರೆ ಅಲ್ಲಿ ನೀರನ್ನು ನಿಲ್ಲಿಸತಕ್ಕಂಥ ವ್ಯವಸ್ಥೆ ಇದೆ. ನೀರು ಸರಬರಾಜನ್ನು ನಿಲ್ಲಿಸಬೇಕಾಗಿತ್ತು. ಆದರೆ ಈ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಸರ್ಕಾರಿ ಸ್ವಾಮ್ಯದ ಕಚೇರಿಗಳು ಆಗಿದ್ದರೆ ಬೇರೆಬೇರೆ ಕಾರಣಗಳಿಂದ ನೀರನ್ನು ಸರಬರಾಜು ಮಾಡಿರಬಹುದು. ಆದರೆ ಖಾಸಗಿಯವರಿಗೆ ಮುಲಾಜು ತೋರಿಸುವುದಕ್ಕೆ ಏನು ಕಾರಣ?

ಶ್ರೀ ಎಸ್.ಎಂ.ಕೃಷ್ಣ: ಖಾಸಗಿಯವರಿಗೆ ಇದು ಯಾವ ಕಾರಣಗಳಿಂದ ಬಾಕಿ ಉಳಿದಿದೆ ಎನ್ನತಕ್ಕದ್ದು ಸ್ಪಷ್ಟಪಡಿಸಿಲ್ಲ. ಆದರೆ ಇದನ್ನು ವೆರಿಫೈ ಮಾಡಿ ನಾನು ತಮಗೆ ತಿಳಿಸುತ್ತೇನೆ. ವಸೂಲು ಮಾಡುವುದಕ್ಕೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಸಿ.ಬೈರೇಗೌಡ: ಎರಡು ಕೋಟಿ ಚಿಲ್ಲರೆ ಬಹಳ ದೊಡ್ಡ ಮೊತ್ತ ಆಗುತ್ತದೆ.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಸದಸ್ಯರು ಹೇಳುತ್ತಾ ಇರತಕ್ಕಂಥ ಪ್ರಕಾರ ಈ ದೊಡ್ಡ ಪ್ರಮಾಣದ ಹಣವನ್ನು ನಾವು ವಸೂಲು ಮಾಡಬೇಕಾಗಿದೆ. ಇದನ್ನು ವಸೂಲಾತಿ ಮಾಡುವುದಕ್ಕೆ ನಾನು ಸಂಬಂಧಪಟ್ಟಂಥ ಸಂಸ್ಥೆಗೆ ಮತ್ತು ಅಧಿಕಾರಿಗಳಿಗೆ ನಿರ್ದೇಶನ ಕೊಡುತ್ತೇನೆ.

ಶ್ರೀ ಆರ್.ಅಶೋಕ್: ಸನ್ಮಾನ್ಯ ಅಧ್ಯಕ್ಷರೇ, ಮಂಡಳಿಯವರು ಕೊಟ್ಟಿರುವ ಉತ್ತರದಲ್ಲಿ ಕೆಲವು ಪಂಚಾಯತಿಗಳ ಹೆಸರುಗಳನ್ನು ಮಂಡನೆ ಮಾಡಿದ್ದಾರೆ. ದೇವರಜೀವನಹಳ್ಳಿ, ಹೆಬ್ಬಾಳ, ಪೀಣ್ಯ ಎಂದು ನಮೂದಿಸಿದ್ದಾರೆ. ನನಗನ್ನಿಸುತ್ತದೆ ಏನೆಂದರೆ ಮಂಡಳಿಯವರಿಗೆ ಕಾಳಜಿಯೇ ಇಲ್ಲ. ಅವುಗಳು ಕಾರ್ಪೊರೇಷನ್ ಆಗಿ ನಾಲ್ಕು ವರ್ಷಗಳಾಗಿವೆ. ಅಂದರೆ ಅವರು ಯಾರೂ ಅಲ್ಲಿಗೆ ಭೇಟಿಯನ್ನೇ ಕೊಟ್ಟಿಲ್ಲ. ನಾವೆಲ್ಲಾ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಏನು ವರದಿಯನ್ನು ಕೊಟ್ಟಿದ್ದಾರೆ, ಅದು ಸರಿಯಿಲ್ಲ. ಇವರು ಯಾರಾದರೂ ಅಧಿಕಾರಿಗಳು ಅಲ್ಲಿ ಭೇಟಿ ಕೊಟ್ಟಿದ್ದರೆ ಅದು ಪಂಚಾಯತಿಯೋ ಅಥವಾ ಕಾರ್ಪೊರೇಷನ್ನೋ ಎಂದು ಗೊತ್ತಾಗುತ್ತಿತ್ತು. ಪಂಚಾಯತಿ ಬದಲಾವಣೆಯಾಗಿ ಕಾರ್ಪೊರೇಷನ್ ಆಗಿ ನಾಲ್ಕು ವರ್ಷವಾಗಿದೆ.

ಅಧ್ಯಕ್ಷರು: ವಸೂಲಿ ಮಾಡುವುದಕ್ಕೆ ಕ್ರಮತೆಗೆದುಕೊಳ್ಳುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಆರ್.ಅಶೋಕ್: ಮಂಡಳಿಯವರು ಭೇಟಿ ಮಾಡಿದ್ದರೆ ಅದರ ಬಗ್ಗೆ ಗೊತ್ತಾಗುತ್ತಿತ್ತು. ಅದಕ್ಕೋಸ್ಕರ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದು ಏನೆಂದರೆ ಯಾವ ರೀತಿ ಇದನ್ನು ವಸೂಲಿ ಮಾಡುತ್ತೀರಿ ಮತ್ತು ಯಾವಾಗ ವಸೂಲಿ ಮಾಡುತ್ತೀರಿ?

ಶ್ರೀ ಎಸ್.ಎಂ.ಕೃಷ್ಣ: ಇವೆಲ್ಲ ಬಹಳ ಹಳೆಯ ಬಾಕಿ. ಈ ಬಾಕಿ ಬಗ್ಗೆ

ದೇವರಜೀವನಹಳ್ಳಿ, ಹೆಬ್ಬಾಳ, ಪೀಣ್ಯ ಇವುಗಳಿಂದ ಬರಬೇಕಾಗಿರತಕ್ಕಂಥ ಹಣ ಏನು ನಮೂದು ಮಾಡಿದ್ದೇವೆ, ಇದು ಬಹಳ ಹಳೆಯ ಬಾಕಿ. ಇದನ್ನು ನಾವು ನಿಷ್ಕರುಣೆಯಿಂದ ವಸೂಲು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಬೀದಿ ಕೊಳಾಯಿಗಳ ಮೂಲಕ ನೀರು ಕೊಡಬೇಕಾಗಿರತಕ್ಕಂಥ ಪ್ರಶ್ನೆ ಇದೆ. ಆದ್ದರಿಂದ ಕೇಂದ್ರಸರ್ಕಾರದ ಕಚೇರಿಗಳು, ರಾಜ್ಯಸರ್ಕಾರದ ಕಚೇರಿಗಳು, ಅರೆಸರ್ಕಾರಿ ಸಂಸ್ಥೆಗಳು ಇವೆಲ್ಲಾ ಇವೆ. ಆದ್ದರಿಂದ ಇದನ್ನು ಏನಾದರೂ ಒಂದು ರೀತಿ ಕರಸಮಾಧಾನ ಮಾಡಿ ಈ ಹಳೆಯ ಬಾಕಿಯೆಲ್ಲವನ್ನು ಹೋಗಲಾಡಿಸುವುದಕ್ಕೆ ಏನಾದರೂ ಒಂದು ಹೊಸ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ.

ರಾಜ್ಯದ ತಾಲ್ಲೂಕುಗಳಲ್ಲಿರುವ ಅಗ್ನಿಶಾಮಕ ಘಟಕಗಳು.

291(2804)

ಶ್ರೀ ಅಂಜನಮೂರ್ತಿ(ನೆಲಮಂಗಲ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ತಾಲ್ಲೂಕಿನಲ್ಲಿ ಅಗ್ನಿಶಾಮಕ ಘಟಕ ಇದೆ.

ಆ) ಅನೇಕ ತಾಲ್ಲೂಕುಗಳಲ್ಲಿ ಹಳ್ಳಿಗಳಲ್ಲಿ ಹುಲ್ಲು, ಬಣವೆ, ಗುಡಿಸಲು, ಮನೆಗಳಿಗೆ ಆಕಸ್ಮಿಕ ಬೆಂಕಿ ಬೀಳುವುದರಿಂದ ಜನ ಜಾನುವಾರು ಸಾವು ಮತ್ತು ನಷ್ಟ ತಡೆಯಲು ಪ್ರತಿ ತಾಲ್ಲೂಕಿನಲ್ಲಿ ಅಗ್ನಿಶಾಮಕ ಘಟಕಗಳನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು):

ಅ) ರಾಜ್ಯದಲ್ಲಿ ಅಗ್ನಿಶಾಮಕ ಘಟಕಗಳು ಇರುವ ಸ್ಥಳಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆಯನ್ನು ಹಂತ ಹಂತವಾಗಿ ತೆರೆಯುವ ಬಗ್ಗೆ ಪರಿಶೀಲಿಸಲಾಗುವುದು.